ಊರು (ಪುರ)ಗಳ ಪಟ್ಟಿಯೇ ಲಭಿಸುತ್ತದೆ. ಬನ್ನೂರು, ತಡಿಮಾಲಂಗಿ, ಸೋಮನಾಥಪುರ ಮುಂತಾದ ಪ್ರಾಚೀನ ಅಗ್ರಹಾರಗಳ ಆಡಳಿತವನ್ನು ಮಹಾಜನರು ನಡೆಸುತ್ತಿದ್ದ ಅಂಶ ಅಲ್ಲಿರುವ ಚೋಳ, ಹೊಯ್ಸಳ ಹಾಗೂ ವಿಜಯನಗರ ಕಾಲದ ಶಾಸನಗಳಿಂದ ವೇದ್ಯವಾಗುತ್ತದೆ. ತಾಲೂಕಿನ ಶಾಸನಗಳಲ್ಲಿ ವ(ಬ)ಡಗೆರೆ, ಹದಿನಾಡು, ಮುಂತಾದ ನಾಡುಗಳ ಪ್ರಸ್ತಾಪವಿದ್ದು, ಅವುಗಳ ಆಡಳಿತವನ್ನು ನಾಡಪ್ರಭು–ಪೆರ್ಗಡೆಗಳು ನಿರ್ವಹಿಸುತ್ತಿದ್ದರು. ಪಟ್ಟಣಗಳೂ ಸ್ಥಳೀಯ ಸಭೆಗಳ ಆಡಳಿತಕ್ಕೆ ಒಳಪಟ್ಟಿರುತ್ತಿದ್ದು, ಸ್ಥಳೀಯ ವರ್ತಕ ಸಂಘದ ಮುಖಂಡನಾದ ಪಟ್ಟಣಸ್ವಾಮಿ ಮುಖ್ಯಸ್ಥನಾಗಿರುತ್ತಿದ್ದನು. ತಲಕಾಡು ಇಪ್ಪತ್ತೈವರ ಆಡಳಿತಕ್ಕೊಳಪಟ್ಟಿದ್ದು, ಪಟ್ಟಣವಸಂತನು ಮುಖ್ಯಸ್ಥನಾಗಿದ್ದ ಅಂಶ ತಲಕಾಡಿನ ಕ್ರಿ.ಶ. ೭೨೬ರ ಶಾಸನದಿಂದ ಗೊತ್ತಾಗುತ್ತದೆ.

ಆದರೆ ಈ ಸಂಬಂಧ ೧೯ನೇ ಶತಮಾನದ ಉತ್ತರಾರ್ಧ ಭಾಗದವರೆವಿಗೆ ಯಾವುದೇ ಸರ್ಕಾರಿ ಕಾಯ್ದೆಗಳಿರಲಿಲ್ಲ. ೧೮೭೦ರ ಕೇಂದ್ರ ಪುರಸಭಾ ನಿಯಂತ್ರಣ ಕಾಯ್ದೆಯು ೧೮೭೧ರಲ್ಲಿ ಸಂಸ್ಥಾನದಲ್ಲೂ ಜಾರಿಗೆ ಬಂದಿತು. ತತ್ಪರಿಣಾಮವಾಗಿ ಮೂರು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇದ್ದ ತಾಲೂಕಿನ ನರಸೀಪುರ, ಬನ್ನೂರು ಹಾಗೂ ಸೋಸಲೆಗಳಲ್ಲಿ ತಾತ್ಕಾಲಿಕ ಪುರಸಭಾ ಸಮಿತಿಗಳು (ಮುನಿಸಿಪಲ್ ಕಮಿಟಿ) ಕಾರ್ಯನಿರ್ವಹಿಸಲಾರಂಭಿಸಿದವು. ೧೯೦೨ ಹಾಗೂ ೧೯೦೬ರ ಸ್ಥಳೀಯ ಬೋರ್ಡು ಕಾಯ್ದೆಗಳನ್ವಯ ಈ ಸ್ಥಳೀಯ ಸಂಸ್ಥೆಗಳಿಗೆ ಸ್ಪಷ್ಟ ರೂಪುರೇಷೆ ಲಭಿಸಿತು. ೧೯೧೮ರ ಸ್ಥಳೀಯ ಬೋರ್ಡು ಕಾಯ್ದೆಯನ್ವಯ ನಷ್ಟದಲ್ಲಿರುವ ಪುರಸಭಾ ಸಮಿತಿಗಳನ್ನು ವಿಸರ್ಜಿಸುವುದರ ಜೊತೆಗೆ ಮುನಿಸಿಪಾಲಿಟಿಗಳನ್ನು ನಗರಸಭೆ, ಪುರಸಭೆ ಹಾಗೂ ಉಪಪುರಸಭೆಗಳೆಂದು ವರ್ಗೀಕರಿಸಲಾಯಿತು. ಅಲ್ಲದೇ ಪುರಸಭೆಯ ಉಪಾಧ್ಯಕ್ಷರನ್ನು ಆಯ್ಕೆ ಮಾಡುವ ಹಕ್ಕನ್ನು ಸದಸ್ಯರಿಗೆ ನೀಡುವುದರ ಜೊತೆಗೆ ಸರ್ಕಾರದ ಹಸ್ತಕ್ಷೇಪವನ್ನು ಸೀಮಿತಗೊಳಿಸಲಾಯಿತು. ೧೯೨೮–೨೯ರ ಕಾಯ್ದೆ ಮಹಿಳೆಯರಿಗೂ ಸದಸ್ಯರಾಗಲು ಅವಕಾಶ ಕಲ್ಪಿಸಿತು. ೧೯೩೩ರ ಉಪಪುರಸಭೆಗಳ ಕಾಯ್ದೆ ಪ್ರಾಪ್ತರಿಗೆ ಮತದಾನದ ಹಕ್ಕನ್ನು ನೀಡುವುದರ ಜೊತೆಗೆ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿತು. ಏತನ್ಮಧ್ಯೆ ೧೯೨೯ರಲ್ಲಿ ನರಸೀಪುರ, ಬನ್ನೂರುಗಳ ಜೊತೆಗೆ ಮೂಗೂರು ಹಾಗೂ ತಲಕಾಡುಗಳಲ್ಲಿ ಉಪಪುರಸಭೆಗಳು ಅಸ್ತಿತ್ವಕ್ಕೆ ಬಂದವು. ಆದರೆ ಸೋಸಲೆಯ ಪುರಸಭೆಯು ರದ್ದಾಯಿತು. ೧೯೩೦–೩೧ರಲ್ಲಿ ತಾಲೂಕಿನ ಉಪಪುರಸಭೆಗಳ ಆದಾಯ ಕ್ರಮವಾಗಿ ನರಸೀಪುರ (ರೂ.೨,೯೭೩), ಬನ್ನೂರು (ರೂ.೨,೧೦೮), ತಲಕಾಡು (ರೂ.೨,೨೨೨) ಹಾಗೂ ಮೂಗೂರು (ರೂ.೧,೯೩೩) ಆಗಿದ್ದರೆ, ವೆಚ್ಚವು ಕ್ರಮವಾಗಿ ರೂ.೨,೮೯೦, ರೂ. ೨,೧೧೪, ರೂ.೨,೧೯೧ ಹಾಗೂ ರೂ, ೧,೬೯೫ ಆಗಿತ್ತು. ಅದೇ ೧೯೪೦–೪೧ರ ಸಾಲಿನಲ್ಲಿ ಇದು ಕ್ರಮವಾಗಿ (ರೂ.೭,೨೩೬ ಮತ್ತು ರೂ.೫,೨೪೨) (ರೂ. ೮,೬೨೦ ಮತ್ತು ರೂ್.೯,೨೮೬) (ರೂ. ೩,೭೪೯ ಮತ್ತು ರೂ, ೩,೪೬೫) ಹಾಗೂ (ರೂ. ೩,೨೯, ರೂ. ೩,೧೭೩) ಗಳಾಗಿತ್ತು.



ಮುಂದೆ ೧೯೫೧ರ ಟೌನ್ ಮುನಿಸಿಪಾಲಿಟಿ ಕಾಯ್ದೆಯು ದೊಡ್ಡ ಹಾಗೂ ಸಣ್ಣ ಮುನಿಸಿಪಾಲಿಟಿಗಳ ವರ್ಗೀಕರಣವನ್ನು ರದ್ದುಗೊಳಿಸುವುದರ ಜೊತೆಗೆ ನಗರಸಭೆಯ ಅಧ್ಯಕ್ಷ–ಉಪಾಧ್ಯಕ್ಷರುಗಳನ್ನು ಸದಸ್ಯರೇ ಆಯ್ಕೆ ಮಾಡುವ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಿತು. ೧೯೫೦–೬೦ರ ದಶಕದಲ್ಲಿ ತಾಲೂಕಿನ ನರಸೀಪುರ, ಬನ್ನೂರು, ತಲಕಾಡು ಹಾಗೂ ಮೂಗೂರುಗಳಲ್ಲಿ ಪುರಸಭೆಗಳು ಕಾರ್ಯನಿರ್ವಹಿಸುತ್ತಿದ್ದವು. ೧೯೬೪ರ ಕರ್ನಾಟಕ ಪುರಸಭೆಗಳ ಕಾಯ್ದೆಯನ್ವಯ ಪಟ್ಟಣದ ಜನಸಂಖ್ಯೆಯು ೨೦,೦೦೦ ಕ್ಕಿಂತ ಕಡಿಮೆ ಇದ್ದಲ್ಲಿ ೧೫ ಜನ ಕೌನ್ಸಿಲರುಗಳನ್ನು ಹೊಂದಿರಬಹುದಾಗಿದ್ದು, ೨೦,೦೦೦ ಜನಸಂಖ್ಯೆಗಿಂತ ಹೆಚ್ಚಿರುವ ಪಟ್ಟಣಗಳಲ್ಲಿ ಪ್ರತಿ ೧೦,೦೦೦ ಜನಸಂಖ್ಯೆಗೆ ನಾಲ್ಕರಿಂದ ಆರು ಕೌನ್ಸಿಲರ್‌ಗಳನ್ನು ಚುನಾಯಿಸಬಹುದಾಗಿತ್ತು. ಆದರೆ ೧೯೬೨ರಲ್ಲಿ ಮೂಗೂರು, ತಲಕಾಡುಗಳ ಪುರಸಭಾ ಆಡಳಿತ ವ್ಯವಸ್ಥೆಯು ರದ್ದಾಗಿ, ೧೯೫೬ರ ಕಾಯ್ದೆಯನ್ವಯ ಪಟ್ಟಣ ಪಂಚಾಯ್ತಿಗಳು ಅಲ್ಲಿ ಅಸ್ತಿತ್ವಕ್ಕೆ ಬಂದು, ನರಸೀಪುರ ಹಾಗೂ ಬನ್ನೂರುಗಳಲ್ಲಿ ಪುರಸಭಾ ಆಡಳಿತ ಮುಂದುವರಿಯಿತು. ತಾಲೂಕಿನ ಎರಡು ನಗರಸಭೆಗಳಲ್ಲಿ ನರಸೀಪುರದ ಆದಾಯ ವೆಚ್ಚ ೧೯೭೬–೭೭ರಲ್ಲಿ ಕ್ರಮವಾಗಿ ರೂ. ೩,೬೬,೨೯೨ ಹಾಗೂ ೩,೩೩,೫೮೬ ಇದ್ದರೆ ಬನ್ನೂರಿನದು ಕ್ರಮವಾಗಿ ೩,೫೪,೭೯೬ ಹಾಗೂ ೩,೫೬,೧೨೧ ರೂ.ಗಳಾಗಿತ್ತು. ಅದೇ ೧೯೮೧–೮೨ರಲ್ಲಿ ಇದು ಕ್ರಮವಾಗಿ ರೂ. ೭,೨೪,೦೬೮ ರೂ. ೬,೫೫,೮೧೮, ೬,೬೫೧೪೮ ರೂ.ಗಳಾಗಿತ್ತು. ೧೯೮೭ರಲ್ಲೂ ಇದೇ ಪರಿಸ್ಥಿತಿ ಇತ್ತು. ಆದರೆ ೧೯೮೩ರ ಜಿಲ್ಲಾ ಪರಿಷತ್ ಕಾಯ್ದೆಯನ್ವಯ ನರಸೀಪುರದ ಪುರಸಭೆಯು ರದ್ದಾಗಿ, ಮಂಡಲ ಪಂಚಾಯಿತಿಯು ೧೯೮೭ರಲ್ಲಿ ಅಸ್ತಿತ್ವಕ್ಕೆ ಬಂದಿತು. ಆದರೆ ಬನ್ನೂರು, ಪುರಸಭೆ ಆಡಳಿತದಲ್ಲೇ ಉಳಿಯಿತು. ಈ ಕಾಯ್ದೆಯನ್ವಯ ಮತದಾನ ವಯಸ್ಸನ್ನು ೨೧ ರಿಂದ ೧೮ ವರ್ಷಗಳಿಗೆ ಇಳಿಸಲಾಯಿತು. ಅಲ್ಲದೇ ಮಹಿಳೆಯರಿಗೆ ಪುರಸಭಾ ಸ್ಥಾನದಲ್ಲಿ ಶೇ.೨೦ ಮೀಸಲಾತಿ ನೀಡಲಾಯಿತು. ಕೌನ್ಸಿಲರುಗಳ ಸದಸ್ಯತ್ವದ ಅವಧಿಯನ್ನು ನಾಲ್ಕರಿಂದ ಐದು ವರ್ಷಗಳಿಗೆ ಏರಿಸಲಾಯಿತು. ಪಟ್ಟಣ ಪಂಚಾಯ್ತಿಯಾಗಿ ಮುಂದುವರಿದ ಮೂಗೂರು ಹಾಗೂ ತಲಕಾಡುಗಳು ೧೯೮೩ರ ಜಿಲ್ಲಾ ಪರಿಷತ್ ಕಾಯ್ದೆಯುನ್ವಯು ೧೯೮೮ರಲ್ಲಿ ವುಂಡಲ ಪಂಚಾಯ್ತಿಗಳಾದವು. ಮಿಗಿಲಾಗಿ ಪುರಸಭೆಗಳಿಗೆ ಸರ್ಕಾರದ ಬಡತನ ನಿರ್ಮೂಲನಾ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿಯನ್ನು ವಹಿಸಲಾಗಿದ್ದು, ವಾರ್ಷಿಕ ಬಜೆಟ್‌ನ ಶೇ. ೧೮ ಭಾಗವನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಭ್ಯುದಯಕ್ಕೆಂದೇ ವೆಚ್ಚ ಮಾಡಬೇಕೆಂದು ನಿರೀಕ್ಷಿಸಲಾಗಿತ್ತು. ೧೯೯೧ರ ಜನಗಣತಿಯ ಪ್ರಕಾರ ತಾಲೂಕಿನಲ್ಲಿ ಬನ್ನೂರು ಪಟ್ಟಣಕ್ಕೆ ಪುರಸಭೆ ಇತ್ತು. ಉಳಿದವು ಮಂಡಲ ಪಂಚಾಯ್ತಿ ಕೇಂದ್ರಗಳಾಗಿದ್ದವು. ೨೦೦೧ರ ಜನಗಣತಿಯ ಪ್ರಕಾರ ತಾಲೂಕು ಕೇಂದ್ರ ನರಸೀಪುರ ಹಾಗೂ ಬನ್ನೂರುಗಳು ಪಟ್ಟಣ ಪಂಚಾಯ್ತಿಯ ಆಡಳಿತಕ್ಕೆ ಒಳಪಟ್ಟಿದ್ದವು.

**ಪಟ್ಟಣಪಂಚಾಯ್ತಿ :** ಗ್ರಾಮ ಪಂಚಾಯ್ತಿ ಹಾಗೂ ಪುರಸಭೆಗಳ ನಡುವಣ ಹಂತದಲ್ಲಿ ಕಾರ್ಯನಿರ್ವಹಿಸುವ ಸ್ಥಳೀಯು ಆಡಳಿತ ಸಂಸ್ಥೆ ಇದಾಗಿದ್ದು (೧೯೫೯ರ

ಕಾಯ್ದೆಯನ್ವಯ) ಐದು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಹಾಗೂ ೧೦,೦೦೦ ರೂ.ಗಿಂತ ಹೆಚ್ಚು ವಾರ್ಷಿಕ ವರಮಾನವಿರುವ ಹಳ್ಳಿಯನ್ನು ಪಟ್ಟಣಪಂಚಾಯ್ತಿ ಎಂದು ಘೋಷಿಸಬಹುದಾಗಿದ್ದು, ಇದು ೧೧ ರಿಂದ ೧೯ ಸದಸ್ಯರನ್ನು ಮೀಸಲಾತಿಯಂತೆ ಹೊಂದಿರಬಹುದಾಗಿತ್ತು. ಅದರಂತೆ ತಾಲೂಕಿನ ತಲಕಾಡು ಹಾಗೂ ಮೂಗೂರುಗಳಲ್ಲಿ ಪಟ್ಟಣ ಪಂಚಾಯ್ತಿಗಳು ೧೯೮೭ರವರೆಗೆ ಕಾರ್ಯನಿರ್ವಹಿಸಿದವು. ಆದರೆ ನಂತರ ಅವು ಮಂಡಲ ಪಂಚಾಯ್ತಿಗಳಾದವು.

**ಪಟ್ಟಣ ಪಂಚಾಯ್ತಿ ತಿ.ನರಸೀಪುರ :** ತಾಲೂಕು ಕೇಂದ್ರ ನರಸೀಪುರದ ಜನಸಂಖ್ಯೆಯು ೨೦೦೧ರ ಜನಗಣತಿಯ ಪ್ರಕಾರ ೯,೯೨೭ (೪,೯೮೯ ಪು + ೪,೯೩೮ ಮ) ಇದ್ದು, ಪಟ್ಟಣದ ಹನ್ನೊಂದು ವಾರ್ಡುಗಳಲ್ಲಿದ್ದ ೨,೧೪೫ ಮನೆಗಳಲ್ಲಿ ವಾಸಿಸುತ್ತಿದ್ದರು. ನರಸೀಪುರದಲ್ಲಿ ೧೮೯೦ರಷ್ಟು ಹಿಂದೆಯೇ ತಾತ್ಕಾಲಿಕ ಪುರಸಭೆಯು ಅಸ್ತಿತ್ವದಲ್ಲಿದ್ದು, ೧೯೧೮ರಲ್ಲಿ ಉಪಪುರಸಭೆಯಾಗಿ ಮಾರ್ಪಟ್ಟು, ೧೯೫೨ರಲ್ಲಿ ನಗರಸಭೆ ದರ್ಜೆಗೇರಿತ್ತು. ಆದರೆ ೧೯೮೭ರಲ್ಲಿ ಮಂಡಲ ಪಂಚಾಯ್ತಿಯ ಸ್ಥಾನಕ್ಕಿಳಿಯಿತು. ಅನಂತರ ೧೯೯೩ರಿಂದ ಪಟ್ಟಣ ಪಂಚಾಯ್ತಿಯ ಆಡಳಿತಕ್ಕೆ ಒಳಪಟ್ಟಿದೆ. ೨೦೦೮-೦೯ರ ಸಾಲಿನಲ್ಲಿ ಡಿಸೆಂಬರ್ ಅಂತ್ಯಕ್ಕೆ ೩೩,೨೪,೬೦೦.೦೦ ರೂ. ಆದಾಯವನ್ನು ಗಳಿಸಿದ್ದು, ೩೭,೩೨,೦೮೦.೦೦ ರೂ.ಗಳನ್ನು ಪಟ್ಟಣ ಅಭಿವೃದ್ಧಿಗೆ ಬಳಸಲಾಗಿತ್ತು.

**ಪಟ್ಟಣ ಪಂಚಾಯ್ತಿ, ಬನ್ನೂರು:** ಹೋಬಳಿ ಕೇಂದ್ರವೂ ಆಗಿರುವ ಬನ್ನೂರಿನ ಜನಸಂಖ್ಯೆಯು, ೨೦೦೧ರ ಜನಗಣತಿಯ ಪ್ರಕಾರ ೨೩,೨೪೯ ಇದ್ದು, ಅದರಂತೆ ಪಟ್ಟಣ ಪಂಚಾಯ್ತಿಯ ಆಡಳಿತಕ್ಕೆ ಇದು ಒಳಪಟ್ಟಿದ್ದು, ಪಟ್ಟಣದ ೨೦ ವಾರ್ಡುಗಳಲ್ಲಿನ ೪,೮೩೧ ಮನೆಗಳಲ್ಲಿ ಇವರು ವಾಸಿಸುತ್ತಿದ್ದರು. ೧೯೮೮ಕ್ಕೆ ಮೊದಲು ನಗರಸಭೆಯನ್ನು ಹೊಂದಿದ್ದ ಬನ್ನೂರು ಪಟ್ಟಣದಲ್ಲಿ ತಾತ್ಕಾಲಿಕ ಪುರಸಭೆಯು ೧೮೯೦ರಷ್ಟು ಹಿಂದೆಯೇ ಅಸ್ತಿತ್ವದಲ್ಲಿದ್ದು, ೧೯೧೮ರಲ್ಲಿ ಇದು ಉಪಪುರಸಭೆಯಾಗಿ ಮಾರ್ಪಟ್ಟು ಅನಂತರ ೧೯೫೨ರಲ್ಲಿ ನಗರಸಭೆ ದರ್ಜೆಗೇರಿತ್ತು. ಪಟ್ಟಣದ ವ್ಯಾಪ್ತಿಯು ೧೯೮೧ರಲ್ಲಿ ೧.೫೨ ಚ.ಕಿ.ಮೀ. ಇದ್ದು, ಜನಸಂಖ್ಯೆಯು ೧೫,೧೦೮ ಆಗಿತ್ತು. ೧೯೮೬ರ ವೇಳೆಗೆ ಪಟ್ಟಣದಲ್ಲಿ ೨,೪೬೮ ಮನೆಗಳಿದ್ದು, ೨,೪೯೧ ತೆರಿಗೆದಾರರಿದ್ದರು. ೧೯೮೬-೮೭ನೇ ಸಾಲಿನಲ್ಲಿ ಪುರಸಭೆಯ ವತಿಯಿಂದ ಸುಮಾರು ೮೨,೦೦೦ ರೂ. ಅಂದಾಜಿನಲ್ಲಿ ಬೋವಿ ಬಡಾವಣೆ ಹಾಗೂ ಮುಸ್ಲಿಮರಿಗಾಗಿ ನವಬಡಾವಣೆಗಳನ್ನು ಪಟ್ಟಣದಲ್ಲಿ ರೂಪಿಸಲಾಯಿತು. ಸುಮಾರು ೧೧ ಲಕ್ಷ ರೂ. ಅಂದಾಜು ವೆಚ್ಚದ ಯೋಜನೆಯಂತೆ ಕಾವೇರಿ ನದಿಯಿಂದ ಪಟ್ಟಣಕ್ಕೆ ಕುಡಿಯುವ ನೀರನ್ನು ನಳದ ಮೂಲಕ ಸರಬರಾಜು ಮಾಡಲಾಗುತ್ತಿದೆ. ೧೯೮೭ರ ವೇಳೆಗೆ ಪಟ್ಟಣದಲ್ಲಿ ೧೦೩೨ ಖಾಸಗಿ ನಳ ಹಾಗೂ ೧೦೮ ಸಾರ್ವಜನಿಕ ನಲ್ಲಿಗಳಿದ್ದು, ದಿನನಿತ್ಯ ಸುಮಾರು ೬೭,೫೦೦ ಲೀ. ನೀರನ್ನು ಒದಗಿಸಲಾಗುತ್ತಿತ್ತು. ಕೊಳಚೆ ನೀರಿನ ವಿಸರ್ಜನೆಗೆ 'ಯು' ಮಾದರಿಯ ೭,೧೫೦ ಮೀ ಉದ್ದದ ತೆರೆದ ಮೋರಿ ವ್ಯವಸ್ಥೆ ಚಾಲ್ತಿಯಲ್ಲಿದ್ದು, ಒಳಚರಂಡಿ ವ್ಯವಸ್ಥೆ ರೂಪಿಸುವ ನಿಟ್ಟಿನಲ್ಲಿ ಚಿಂತಿಸಲಾಗಿತ್ತು. ಪುರಸಭೆಯಲ್ಲಿ ೨೦ ಪೌರ ಕಾರ್ಮಿಕರೂ ಸೇರಿದಂತೆ



೨೭ ಜನ ನೌಕರರು ಪಟ್ಟಣದ ಸ್ವಚ್ಛತೆಯಲ್ಲಿ ನಿರತರಾಗಿದ್ದರು. ಪುರಸಭೆಯ ನಿಯಂತ್ರಣದಲ್ಲಿದ್ದ ೫.೮ ಕಿ.ಮೀ. ರಸ್ತೆ ೧೯೮೭ರ ವೇಳೆಗೆ ಪಟ್ಟಣದಲ್ಲಿತ್ತು. ಪಟ್ಟಣಕ್ಕೆ ೧೯೩೯-೪೦ರ ಸಾಲಿನಲ್ಲಿ ವಿದ್ಯುತ್ ಸೌಲಭ್ಯ ದೊರೆತು, ೧೯೮೭ರ ವೇಳೆಗೆ ೧,೮೨೦ ಗೃಹ ಸಂಪರ್ಕ ಹಾಗೂ ೪೧೪ ಬೀದಿ ದೀಪಗಳಿದ್ದವು. ಸುಮಾರು ನಾಲ್ಕು ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಪುರಸಭಾ ಭವನವನ್ನು ೧೯೮೬ರಲ್ಲಿ ನಿರ್ಮಿಸಲಾಯಿತು. ೨೦೦೧ರ ಜನಗಣತಿಯ ನಂತರ ಪಟ್ಟಣ ಪಂಚಾಯ್ತಿಯ ಆಡಳಿತಕ್ಕೊಳಪಟ್ಟಿತ್ತು. ೨೦೦೯ರಲ್ಲಿ ಇದನ್ನು ಮತ್ತೆ ಪುರಸಭೆಯನ್ನಾಗಿ ಮಾರ್ಪಡಿಸಲಾಗಿದೆ. ಅದರಂತೆ ಈ ಪುರಸಭೆಯು ೨೦೦೯ರ ಡಿಸೆಂಬರ್ ಅಂತ್ಯಕ್ಕೆ ೨೩೦.೨೬ ಲಕ್ಷ ರೂ. ಆದಾಯ ಪಡೆದಿದ್ದು, ೯೫.೪೯ ಲಕ್ಷ ರೂ.ಗಳನ್ನು ವ್ಯಯಿಸಲಾಗಿತ್ತು.

**ಪಟ್ಟಣಯೋಜನೆ :** ಮೈಸೂರು ನಗರದ ಅಭಿವೃದ್ಧಿಗೆ ನಗರಾಭಿವೃದ್ಧಿ ಪ್ರಾಧಿಕಾರ, ೧೯೦೩ರಷ್ಟು ಹಿಂದಿನಿಂದಲೇ ಶ್ರಮಿಸುತ್ತಿದ್ದು, ೧೯೬೪ರಲ್ಲಿ ಜಿಲ್ಲಾ ವ್ಯಾಪ್ತಿಯನ್ನು ಹೊಂದಿರುವ ನಗರಯೋಜನಾ ಸಹಾಯಕ ನಿರ್ದೇಶಕರ ಕಚೇರಿಯನ್ನು ಕೇಂದ್ರ ಪುರಸ್ಕೃತ ಯೋಜನೆಯಡಿ ಮೈಸೂರಿನಲ್ಲಿ ಆರಂಭಿಸಲಾಯಿತು. ಈ ಕಚೇರಿಯು ೧೯೮೭ರವರೆಗೆ ಸುಮಾರು ೧೨೩ ಪಟ್ಟಣ ಬಡಾವಣೆ ಯೋಜನೆಗಳನ್ನು ಸಿದ್ಧಪಡಿಸಿದ್ದು, ಅದರಲ್ಲಿ ೮೦ ಯೋಜನೆ ಮೈಸೂರು ನಗರಕ್ಕೂ ೧೩ ಯೋಜನೆ ಮೈಸೂರು ತಾಲೂಕಿಗೂ ಹಾಗೂ ಉಳಿದ ೩೦ ಯೋಜನೆಗಳು ಇತರ ತಾಲೂಕು ಕೇಂದ್ರ ಪಟ್ಟಣಗಳಿಗೂ ಸಂಬಂಧಿಸಿದ್ದಾಗಿದ್ದವು. ಅಲ್ಲದೇ ಸೋಸಲೆಗೆ ಸಂಬಂಧಿಸಿದಂತೆ ೨೦೦೧ರಲ್ಲಿ ಪೂರ್ಣಗೊಳ್ಳುವಂತಹ ಸಮಗ್ರಾಭಿವೃದ್ಧಿ ಯೋಜನೆಯನ್ನು ೧೯೮೧ರಲ್ಲೇ ಸಿದ್ಧಪಡಿಸಲಾಗಿತ್ತು. ನಗರ ಯೋಜನಾ ಇಲಾಖೆಯು ತಾಲೂಕು ಕೇಂದ್ರ ನರಸೀಪುರ ಹಾಗೂ ಬನ್ನೂರುಗಳನ್ನು ಮಾರುಕಟ್ಟೆ ಹಾಗೂ ಸೇವಾಕೇಂದ್ರಗಳೆಂದೂ, ತಲಕಾಡು, ಸೋಸಲೆ ಹಾಗೂ ಮೂಗೂರುಗಳನ್ನು ಸೇವಾಕೇಂದ್ರಗಳೆಂದೂ ಬಿನಕನಹಳ್ಳಿ, ಸೋಮನಾಥಪುರ, ಹೊಸಕೋಟೆ,ಕೇತುಪುರ, ಯಾಚೇನಹಳ್ಳಿ ಕೊಡಗಹಳ್ಳಿ ಹಾಗೂ ತಲಕಾಡುಗಳನ್ನು ಬೆಳವಣಿಗೆ ಕೇಂದ್ರಗಳೆಂದು ಗುರುತಿಸಿದ್ದು, ಅವುಗಳ ಅಭಿವೃದ್ಧಿಗೆ ಯೋಜನೆಗಳನ್ನು ಅದಾಗಲೇ ರೂಪಿಸಿತ್ತು.

**ಸ್ಥಳೀಯ ಬೋರ್ಡುಗಳು :** ಗ್ರಾಮೀಣ ರಸ್ತೆ ಸಂಪರ್ಕ, ಆರೋಗ್ಯ, ಒಳಚರಂಡಿ ವ್ಯವಸ್ಥೆ, ಶಿಕ್ಷಣ ಸೌಕರ್ಯ ಮುಂತಾದವನ್ನು ಪುರಸಭಾ ವ್ಯಾಪ್ತಿಯಿಂದ ಹೊರಗಿರುವ ಪ್ರದೇಶಗಳಲ್ಲಿ ಒದಗಿಸುವ ಉದ್ದೇಶದಿಂದ ೧೯೦೨ರ ಮೈಸೂರು ಲೋಕಲ್ ಬೋರ್ಡು ನಿಯಮ ನಾಲ್ಕರ ಪ್ರಕಾರ ಜಿಲ್ಲಾ ಲೋಕಲ್ ಬೋರ್ಡುಗಳು ಅಸ್ತಿತ್ವಕ್ಕೆ ಬರುವುದಕ್ಕೆ ಮೊದಲು ಜಿಲ್ಲಾ ಸ್ಥಳೀಯ ನಿಧಿ ವೃತ್ತಗಳು ಮುಖ್ಯ ಕಂದಾಯಾಧಿಕಾರಿ, ಅಮಲ್ದಾರುಗಳನ್ನು ಪದನಿಮಿತ್ತ ಸದಸ್ಯರು ಹಾಗೂ ಏಳು ಸರ್ಕಾರೇತರ ಪ್ರತಿನಿಧಿಗಳನ್ನು ಹೊಂದಿದ್ದು, ಈ ಕಾರ್ಯವನ್ನು ನಿರ್ವಹಿಸುತ್ತಿದ್ದವು. ಆಗ ಜಿಲ್ಲಾ ಲೋಕಲ್ ಬೋರ್ಡಿನೊಂದಿಗೆ ತಾಲೂಕು ಲೋಕಲ್ ಬೋರ್ಡುಗಳು ಅಸ್ತಿತ್ವಕ್ಕೆ ಬಂದವು. ಮುಂದೆ ೧೯೧೮ರ ಕಾಯ್ದೆಯನ್ವಯ ಗ್ರಾಮ ಪಂಚಾಯ್ತಿಗಳು ಗ್ರಾಮೀಣ ಪ್ರದೇಶದಲ್ಲಿ

ಸ್ಥಾಪಿಸಲ್ಪಟ್ಟವು. ಈ ಕಾಯ್ದೆಯನ್ವಯ ತಾಲೂಕು ಬೋರ್ಡಿನ ಸದಸ್ಯತ್ವವನ್ನು ಪ್ರಮುಖ ಕೋಮಿನವರಿಗೆ ನೀಡಲಾಯಿತು. ಇದರೊಂದಿಗೆ ಆವರೆಗೆ ಇದ್ದ ತಾಲೂಕು ಸಮಿತಿಯ ಪ್ರಗತಿಪರ ಕಾರ್ಯಕ್ರಮ ಯೋಜನೆಗಳನ್ನು ತಾಲೂಕು ಬೋರ್ಡಿಗೆ ವರ್ಗಾಯಿಸಲಾಯಿತು. ಆದರೆ ೧೯೧೭ರ ಲೋಕಲ್ ಬೋರ್ಡು ಕಾಯ್ದೆ, ತಾಲೂಕು ಬೋರ್ಡುಗಳನ್ನು ರದ್ದುಗೊಳಿಸುವ ಮೂಲಕ ಜಿಲ್ಲಾ ಬೋರ್ಡು, ಸ್ಥಳೀಯ ಅಭಿವೃದ್ಧಿಯತ್ತ ಪೂರ್ಣ ಗಮನ ಹರಿಸಲು ಅವಕಾಶ ಕಲ್ಪಿಸಲಾಯಿತು. ಇದರೊಂದಿಗೆ ಗ್ರಾಮಪಂಚಾಯ್ತಿಗಳೂ ನಿಷ್ಕ್ರಿಯಗೊಂಡವು. ೧೯೨೮–೨೯ರಲ್ಲಿ ಮಹಿಳೆಯರಿಗೂ ಮತದಾನದ ಹಕ್ಕನ್ನು ನೀಡಲಾಯಿತು. ಆದರೆ ತಾಲೂಕು ಬೋರ್ಡುಗಳಿಗೆ ಬದಲಾಗಿ, ಹಿಂದೆ ಇದ್ದ ತಾಲೂಕು ಸಮಿತಿ ವ್ಯವಸ್ಥೆಯನ್ನು ಪುನರಾರಂಭಿಸಲಾಯಿತು. ಸ್ವಾತಂತ್ರ್ಯಾನಂತರ ವಿ.ವೆಂಕಟಪ್ಪ ಸಮಿತಿ (೧೯೫೧) ವರದಿಯಂತೆ ೧೯೫೨ರ ಮೈಸೂರು ಗ್ರಾಮ ಪಂಚಾಯ್ತಿ ಹಾಗೂ ಜಿಲ್ಲಾ ಬೋರ್ಡು ಕಾಯ್ದೆಯಲ್ಲಿ ಎರಡು ಸ್ತರದ ಸ್ಥಳೀಯ ಆಡಳಿತ ವ್ಯವಸ್ಥೆಗೆ ಒತ್ತು ನೀಡಲಾಯಿತು. ಮುಂದೆ ೧೯೫೩ರಲ್ಲಿ ರಚಿಸಲ್ಪಟ್ಟ ಡಿ.ಚಂದ್ರಶೇರಯ್ಯ ಸಮಿತಿ, ಜಿಲ್ಲಾ, ತಾಲೂಕು ಹಾಗೂ ಗ್ರಾಮ ಪಂಚಾಯ್ತಿಗಳನ್ನೊಳಗೊಂಡ ಮೂರು ಸ್ತರದ ಸ್ಥಳೀಯ ಆಡಳಿತ ವ್ಯವಸ್ಥೆಗೆ ಶಿಫಾರಸ್ಸು ಮಾಡಿತು. ಏಕೀಕರಣದ ನಂತರ ಗ್ರಾಮಪಂಚಾಯ್ತಿ, ತಾಲೂಕು ಬೋರ್ಡು ಹಾಗೂ ಜಿಲ್ಲಾ ಅಭಿವೃದ್ಧಿ ಮಂಡಳಿಗಳು ೧೯೫೯ರ ಕಾಯ್ದೆಯನ್ವಯ ೧೯೬೦ರಲ್ಲಿ ಅಸ್ತಿತ್ವಕ್ಕೆ ಬಂದವು. ಪಂಚಾಯತ್ ರಾಜ್ ಮೂಲಕ ಗ್ರಾಮಸ್ವರಾಜ್ಯ ಸ್ಥಾಪಿಸುವ ನಿಟ್ಟಿನಲ್ಲಿ ಏಕೀಕೃತ ಕರ್ನಾಟಕದ ಮೊದಲ ಕಾಯ್ದೆ ಇದಾಗಿತ್ತು. ಈ ಕಾಯ್ದೆಯಂತೆ, ತಾಲೂಕು ಅಭಿವೃದ್ಧಿ ಮಂಡಳಿಯು ೧೯೬೦ರಲ್ಲಿ ನರಸೀಪುರ ತಾಲೂಕಿನಲ್ಲೂ ಕಾರ್ಯಾರಂಭಮಾಡಿತು. ಪುರಸಭಾ ವ್ಯಾಪ್ತಿಗೊಳಪಟ್ಟ ಪ್ರದೇಶವನ್ನು ಹೊರತುಪಡಿಸಿ ತಾಲೂಕಿನ ಉಳಿದ ಪ್ರದೇಶಗಳ ವ್ಯಾಪ್ತಿಯನ್ನು ಹೊಂದಿದ್ದ ತಾಲೂಕು ಬೋರ್ಡಿಗೆ, ೧೯ ಸ್ಥಾನಗಳನ್ನು (ತಾಲೂಕಿನ ಜನಸಂಖ್ಯೆ ಒಂದು ಲಕ್ಷಕ್ಕಿಂತ ಕಡಿಮೆ ಇದ್ದರೆ ೧೫, ಅದಕ್ಕಿಂತ ಜಾಸ್ತಿಯಿದ್ದರೆ ೧೯) ನಿಗದಿಪಡಿಸಿ ಕಾಲಾವಧಿಯನ್ನು ನಾಲ್ಕರಿಂದ ಐದು ವರ್ಷಗಳಿಗೇರಿಸಲಾಯಿತು. ತಾಲೂಕಿನ ಚುನಾಯಿತ ಶಾಸಕರು ಮಂಡಳಿಯ ಪದನಿಮಿತ್ತ ಸದಸ್ಯರಾಗಿರುತ್ತಿದ್ದು, ಕ್ಷೇತ್ರಾಭಿವೃದ್ಧಿ ಅಧಿಕಾರಿಯು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯಾಗಿರುತ್ತಿದ್ದರು. ಸರ್ಕಾರದ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದರ ಜೊತೆಗೆ ಕುಡಿಯುವ ನೀರಿನ ಬಾವಿ ಇಲ್ಲವೆ ಕೊಳವೆ ಬಾವಿಗಳನ್ನು ತೋಡುವುದು, ಸಣ್ಣ ನೀರಾವರಿ, ಗ್ರಾಮೀಣ ರಸ್ತೆ ನಿರ್ಮಾಣ ಮುಂತಾದ ಸಾರ್ವಜನಿಕ ಅಭಿವೃದ್ಧಿ ಕಾರ್ಯಗಳನ್ನು ಇದು ಕೈಗೊಳ್ಳಬೇಕಾಗಿತ್ತು.

ತಾಲೂಕಿನ ಭೂಕಂದಾಯದ ಶೇ. ೫೦ ಭಾಗ ವಾರ್ಷಿಕ ಅನುದಾನವನ್ನು ಪಡೆಯುವುದರ ಜೊತೆಗೆ ಸರ್ಕಾರ ನಿರ್ದೇಶಿಸಿದ ಕಾರ್ಯಗಳಿಗೆ ವೆಚ್ಚ ಮಾಡಲು ಶೇ.೧೦ ಹಣ ಮಂಡಳಿಗೆ ದೊರೆಯುತ್ತಿತ್ತು. ತಾಲೂಕಿನ ಭೂಕಂದಾಯ ಅನುದಾನವನ್ನು ೬೦:೪೦ರ ಪ್ರಮಾಣದಲ್ಲಿ ತಾಲೂಕು ಮಂಡಳಿ ಹಾಗೂ ಗ್ರಾಮಪಂಚಾಯ್ತಿಗಳ ನಡುವೆ ಹಂಚಲಾಗುತ್ತಿತ್ತು. ಸ್ಥಿರಾಸ್ತಿಗಳ ಮೇಲೆ ಸುಂಕ ಹಾಗೂ ಮಾರಾಟಕ್ಕೆ ತಂದ



ಜಾನುವಾರುಗಳಿಗೆ ಮಾರಾಟ ತೆರಿಗೆಯನ್ನು ವಿಧಿಸುವ ಹಕ್ಕು ಈ ಮಂಡಳಿಗಿತ್ತು. ಈ ಮಂಡಳಿಗಳಿಗೆ, ೧೯೮೭ರವರೆಗೆ ೧೯೮೩ರ ಚುನಾವಣೆಯೂ ಸೇರಿದಂತೆ ಐದು ಚುನಾವಣೆಗಳು ನಡೆದು ಅಧಿಕಾರಕ್ಕೆ ಬಂದ ಮಂಡಳಿಗಳು ತಾಲೂಕಿನ ಅಭಿವೃದ್ಧಿಯಲ್ಲಿ ಕೈಜೋಡಿಸಿದ್ದವು. ಆದರೆ ೧೯೮೩ರ ಜಿಲ್ಲಾ ಪರಿಷತ್ ಕಾಯ್ದೆಯನ್ವಯ ೧೯೮೭ರಿಂದ ಇದಕ್ಕೆ ಬದಲು ತಾಲೂಕು ಪಂಚಾಯಿತಿ ಸಮಿತಿಯು ಕಾರ್ಯನಿರ್ವಹಿಸುತ್ತಿದೆ. ೧೯೮೬–೮೭ರ ಸಾಲಿನಲ್ಲಿ ನರಸೀಪುರ ತಾಲೂಕು ಮಂಡಳಿಗೆ ಭೂಕಂದಾಯ ಅನುದಾನವಾಗಿ ರೂ. ೧,೬೧,೦೫೯ ತೆರಿಗೆ ರೂಪದಲ್ಲಿ ೪,೩೬,೩೨೭ ಸ್ತಿರಾಸ್ತಿ ತೆರಿಗೆ ೬೭,೭೨೨ ಇತರೆ ಮೂಲಗಳಿಂದ ರೂ. ೧,೦೪,೮೭೦ ಸರ್ಕಾರದ ಅನುದಾನ ರೂ. ೮೧,೦೦೦ ಹಾಗೂ ಬಾಕಿ ಬಾಬ್ತು ರೂ. ೩,೨೯,೫೪೬ ಆಗಿತ್ತು. ಆ ಸಾಲಿನಲ್ಲಿ ತಾಲೂಕು ಮಂಡಳಿಯು ಆಡಳಿತದ ವೆಚ್ಚಕ್ಕೆ ರೂ. ೧,೨೫,೧೮೭ ಸಾರ್ವಜನಿಕ ಕಾರ್ಯಕ್ಕಾಗಿ ರೂ.೧,೦೭,೫೮೭ ಸಾರ್ವಜನಿಕ ಆರೋಗ್ಯಕ್ಕೆ ರೂ. ೪೫,೧೬೫, ನಾಗರಿಕ ಸೌಲಭ್ಯಕ್ಕೆ ರೂ. ೨೧,೮೮೨ ನೀಡಿದ ಅನುದಾನ ರೂ. ೧೫,೯೪೭ ಇತರೆ ವೆಚ್ಚ ರೂ. ೨,೪೫,೮೭೦ ಹಾಗೂ ಬರಬೇಕಾದ ಬಾಕಿ ಬಾಬ್ತು ರೂ. ೩,೦೫,೬೬೩ ಆಗಿತ್ತು.

**ಮಂಡಲ ಪಂಚಾಯ್ತಿ ತಲಕಾಡು :** ತಲಕಾಡಿನಲ್ಲಿ ೧೭ ಚುನಾಯಿತ ಸದಸ್ಯರನ್ನೊಳಗೊಂಡ ಪಟ್ಟಣ ಪಂಚಾಯ್ತಿಯು ೧೯೬೨ರಲ್ಲಿ ಅಸ್ತಿತ್ವಕ್ಕೆ ಬಂದಿತು. ತಲಕಾಡಿನ ವ್ಯಾಪ್ತಿಯು ೧೯೮೧ರಲ್ಲಿ ೧,೪೮೪ ಹೆಕ್ಟೇರಾಗಿದ್ದು, ೭,೮೭೭ ಜನಸಂಖ್ಯೆ ಇತ್ತು. ಅದೇ ೧೯೮೭ರ ವೇಳೆಗೆ ತಲಕಾಡಿನಲ್ಲಿ ೨,೪೫೦ ವಾಸದ ಮನೆಗಳಿದ್ದು, ೨,೧೦೦ ಮಂದಿ ತೆರಿಗೆದಾರರಿದ್ದು, ಪಟ್ಟಣ ಪಂಚಾಯ್ತಿ ಸಮಿತಿಯ ತಲಾ ವರಮಾನ ಹಾಗೂ ವೆಚ್ಚ ಕ್ರಮವಾಗಿ ರೂ.೭,೧೫ ರೂ.೭.೩೮ ಇತ್ತು. ಅಲ್ಲದೆ ನೂತನ ಬಡಾವಣೆಯನ್ನು ನಿರ್ಮಿಸಿ ಹಳೆ ಊರಿಗೆ ಸೇರಿಸಲಾಗಿದ್ದು, ಸುಮಾರು ೫೦೦ ನಿರ್ವಸಿತರಿಗೆ ನಿವೇಶನವನ್ನು ಹಂಚಲಾಗಿತ್ತು. ೧೯೮೬–೮೭ರ ಸಾಲಿನಲ್ಲಿ ಇದರ ಒಟ್ಟು ಆದಾಯವು ರೂ.೫೬,೯೮೧ ಇದ್ದು, ೫೭,೯೮೧ ರೂ.ಗಳನ್ನು ವೆಚ್ಚ ಮಾಡಲಾಗಿತ್ತು. ಪಟ್ಟಣಕ್ಕೆ ಕಾವೇರಿ ನದಿಯಿಂದ ಕುಡಿಯುವ ನೀರನ್ನು ೧೯೬೭–೬೮ರಿಂದ ಒದಗಿಸಲಾಗುತ್ತಿದ್ದು, ಅದಕ್ಕಾಗಿ ೧.೨೦ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿತ್ತು. ಪಟ್ಟಣಕ್ಕೆ ದಿನನಿತ್ಯ ೧.೧೨ ಲಕ್ಷ ಲೀಟರ್ ನೀರಿನ (ತಲಾ ೧೪ ಲೀಟರು) ಅಗತ್ಯವಿದ್ದು, ಸುಮಾರು ೪೫೦ ಖಾಸಗಿ ನಳ ಹಾಗೂ ೧೧೦ ಸಾರ್ವಜನಿಕ ಕೊಳಾಯಿಗಳು ೧೯೮೮ರ ವೇಳೆಗೆ ಪಟ್ಟಣದಲ್ಲಿದ್ದವೆಂದು ತಿಳಿದುಬರುತ್ತದೆ. ಪಟ್ಟಣದ ಸ್ವಚ್ಛತೆಗೆ ೧೦ ಮಂದಿ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು, ಜಾತ್ರೆ, ಪಂಚಲಿಂಗದರ್ಶನದಂತಹ ವಿಶೇಷ ಸಂದರ್ಭದಲ್ಲಿ ಯಾತ್ರಿಕರಿಗೆ ಶೌಚಾಲಯ, ಸ್ನಾನಗೃಹಗಳಂತಹ ಮೂಲಭೂತ ಸೌಕರ್ಯವನ್ನು ತಾತ್ಕಾಲಿಕವಾಗಿ ಒದಗಿಸಲು ಪೂರಕವಾಗಿ ವಿಶೇಷ ಅನುದಾನವನ್ನು ಸಮಿತಿಗೆ ಸರ್ಕಾರವು ನೀಡುತ್ತಿದೆ. ೧೯೮೭ರಲ್ಲಿ ಮಂಡಲ ಪಂಚಾಯ್ತಿಯು ಅಸ್ತಿತ್ವಕ್ಕೆ ಬಂದು ತಲಕಾಡು ಮಂಡಲ ಪಂಚಾಯ್ತಿಯ ವ್ಯಾಪ್ತಿಗೆ ೧) ತಲಕಾಡು, ೨) ವಡೆಯಾಂಡಹಳ್ಳಿ, ೩) ಶೆಟ್ಟಿಹಳ್ಳಿ ಹಾಗೂ ೪) ಟಿ.ಬೆಟ್ಟಹಳ್ಳಿಗಳು ಒಳಪಡುತ್ತವೆ. ಒಟ್ಟು ೨೬ ಸದಸ್ಯ

(ಇಬ್ಬರು ನಾಮಕಾರಣ)ರನ್ನು ಹೊಂದಿರುವ ಇದಕ್ಕೆ ಜಿಲ್ಲಾ ಪಂಚಾಯ್ತಿಯು ನೇಮಕ ಮಾಡುವ ಕಾರ್ಯದರ್ಶಿ ಮುಖ್ಯಸ್ಥರಿದ್ದು, ಅವರ ನೆರವಿಗೆ ೨೦ ಮಂದಿ ಸಿಬ್ಬಂದಿಗಳಿರುತ್ತಾರೆ. ಮಂಡಲ ಪಂಚಾಯ್ತಿಯು ೧೯೮೭–೮೮ರ ಸಾಲಿನಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳಿಗೆಂದು ರೂ.೯೧,೧೩೧ಗಳನ್ನು ವೆಚ್ಚ ಮಾಡಿತ್ತು. ೨೦೦೧ರ ಗಣತಿಯಂತೆ ಇಂದು ಇದು ಗ್ರಾಮಪಂಚಾಯ್ತಿ ಆಡಳಿತಕ್ಕೊಳಪಟ್ಟಿದೆ.

**ಮಂಡಲ ಪಂಚಾಯ್ತಿ ಮೂಗೂರು :** ಮೂಗೂರಿನಲ್ಲೂ ೧೯೬೨ರಲ್ಲಿ ೧೯೫೯ರ ಕಾಯ್ದೆಯಂತೆ ಅಸ್ತಿತ್ವಕ್ಕೆ ಬಂದ ಪಟ್ಟಣ ಪಂಚಾಯ್ತಿ ಸಮಿತಿಗೆ ೧೧ ರಿಂದ ೧೯ ಸದಸ್ಯರಿದ್ದು ಅವರ ಮಾರ್ಗದರ್ಶನದಲ್ಲಿ ಊರಿನ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿತ್ತು. ೧೯೮೩ರ ಜಿಲ್ಲಾ ಪರಿಷತ್ ಕಾಯ್ದೆಯನ್ವಯ ಅದೂ ಕೂಡ ೧೯೮೭ರಿಂದ ಮಂಡಲ ಪಂಚಾಯ್ತಿಯ ಸ್ಥಾನಕ್ಕೆ ದೂಡಲ್ಪಟ್ಟಿದು. ೨೦೦೧ರ ಜನಗಣತಿಯಂತೆ ಇಂದು ಗ್ರಾಮಪಂಚಾಯ್ತಿಯ ಆಡಳಿತಕ್ಕೆ ಒಳಪಟ್ಟಿದೆ.

**ಗ್ರಾಮಪಂಚಾಯ್ತಿಗಳು :** ಆಧುನಿಕ ಗ್ರಾಮಪಂಚಾಯ್ತಿ ಆಡಳಿತ ವ್ಯವಸ್ಥೆಯು ಜಾರಿಗೆ ಬರುವುದಕ್ಕೆ ಮೊದಲೇ ಸಂಸ್ಥಾನದ ಗ್ರಾಮಗಳ ರಕ್ಷಣೆಯನ್ನು ನೈರ್ಮಲ್ಯವನ್ನು ಆರೋಗ್ಯ ಇಲಾಖೆಯೇ ೧೮೯೮ರ ಗ್ರಾಮೀಣ ನೈರ್ಮಲ್ಯ ಕಾಯ್ದೆಯನ್ವಯ ನಿರ್ವಹಿಸುತ್ತಿತ್ತು. ಹಳ್ಳಿಗಳ ಅಭಿವೃದ್ಧಿ ಯೋಜನೆಯನ್ನು ಸರ್.ಎಂ. ವಿಶ್ವೇಶ್ವರಯ್ಯನವರು ೧೯೧೪ರಷ್ಟು ಹಿಂದೆಯೇ ಜಾರಿಗೊಳಿಸಿದ್ದರು. ಮುಂದೆ ೧೯೧೮ರ ಕಾಯ್ದೆಯನ್ವಯ ಸಂಸ್ಥಾನದಲ್ಲಿ ಕಾನೂನುಬದ್ಧ ಗ್ರಾಮಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದವು. ಅದರಂತೆ ಪ್ರತಿ ಗ್ರಾಮಕ್ಕೆ ಕೆಲವೊಮ್ಮೆ ಗ್ರಾಮಗಳ ಗುಂಪಿಗೆ ರೂಪಿಸಲ್ಪಟ್ಟ ಗ್ರಾಮಪಂಚಾಯ್ತಿಗಳಿಗೆ ನಾಮಾಂಕಿತ ಅಧ್ಯಕ್ಷರನ್ನು ನೇಮಿಸಲಾಗುತ್ತಿದ್ದು, ಅವುಗಳಿಗಾಗಿ ಪ್ರತ್ಯೇಕ ಸಂಪನ್ಮೂಲವನ್ನು ಒದಗಿಸಲಾಯಿತು. ಮುಂದೆ ೧೯೨೭ರಲ್ಲಿ ಗ್ರಾಮ ಅಭಿವೃದ್ಧಿ ಸಮಿತಿಗಳನ್ನು ರದ್ದುಪಡಿಸಿ, ಪಂಚಾಯ್ತಿಗಳನ್ನು ಶಾಸನಬದ್ಧವಾಗಿ ರಚಿಸಲಾಯಿತು. ಪಂಚಾಯ್ತಿಗಳಿಗೆ ಐದರಿಂದ ಹನ್ನೆರಡು ಸದಸ್ಯರಿದ್ದು, ಅರ್ಧದಷ್ಟು ಸದಸ್ಯರನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಗುತ್ತಿತ್ತು. ಗ್ರಾಮಪಂಚಾಯ್ತಿಗಳು ಹಳ್ಳಿಯ ನೈರ್ಮಲ್ಯ, ಸಂಪರ್ಕ, ಆರೋಗ್ಯ ಮುಂತಾದ ಕಡ್ಡಾಯ ಹಾಗೂ ಐಚ್ಛಿಕ ಕಾರ್ಯಗಳನ್ನು ನಿರ್ವಹಿಸಬೇಕಾಗಿತ್ತು. ಮನೆ, ಅಂಗಡಿ, ನಿವೇಶನ, ಹಿತ್ತಿಲುಗಳ ಮೇಲೆ ತೆರಿಗೆ ವಿಧಿಸುವ ಅಧಿಕಾರ ಗ್ರಾಮಪಂಚಾಯ್ತಿಗಳಿಗಿದ್ದು, ಇವನ್ನು ೧೯೨೭ರ ಕಾಯ್ದೆಯ ನಿಬಂಧನೆ ಮೂರರ ಪ್ರಕಾರ ಸ್ಥಳೀಯ ಕಂದಾಯ ಅಧಿಕಾರಿಗಳ ನೇರ ನಿಯಂತ್ರಣಕ್ಕೊಳಪಡಿಸಿ ಉಸ್ತುವಾರಿಯನ್ನು ತಹಶೀಲ್ದಾರರಿಗೆ ವಹಿಸಲಾಯಿತು. ಅದರಂತೆ ೧೯೪೬ರ ವೇಳೆಗೆ ತಾಲೂಕಿನಲ್ಲಿದ್ದ ೧೨೫ ಗ್ರಾಮ ಪಂಚಾಯ್ತಿಗಳು ೧೯೫೯ರವರೆಗೆ ಇವು ಜಿಲ್ಲಾ ಮಂಡಳಿ ಕಾಯ್ದೆಯನ್ವಯ ಕಾರ್ಯನಿರ್ವಹಿಸುತ್ತಿದ್ದವು. ಅನಂತರ ೧೯೫೯ರ ಕರ್ನಾಟಕ ಗ್ರಾಮಪಂಚಾಯ್ತಿ ಮತ್ತು ಸ್ಥಳೀಯ ಸಂಸ್ಥೆಗಳ ಕಾಯ್ದೆಯು ೧೯೮೫ರವರೆಗೆ ಜಾರಿಯಲ್ಲಿತ್ತು. ಆ ಪ್ರಕಾರ ೧೫೦೦–೧೦,೦೦೦ ಜನಸಂಖ್ಯೆಯನ್ನು ಹೊಂದಿರುವ ಕಂದಾಯ ಗ್ರಾಮ ಅಥವಾ ಕಂದಾಯ ಗ್ರಾಮಗಳ ಗುಂಪಿಗೆ ಒಂದರಂತೆ ಗ್ರಾಮಪಂಚಾಯ್ತಿಗಳು



ಕಾರ್ಯನಿರ್ವಹಿಸುತ್ತಿದ್ದವು. ಪ್ರತಿ ಪಂಚಾಯ್ತಿಯಲ್ಲೂ ೧೧ ರಿಂದ ೧೯ ಸದಸ್ಯರು ಇರಬೇಕಾಗಿತ್ತು.

ಪ್ರತಿ ಗ್ರಾಮಪಂಚಾಯ್ತಿಗೆ ಬೇಕಾದ ಆರ್ಥಿಕ ಸಂಪನ್ಮೂಲವನ್ನು ಆಯಾ ಗ್ರಾಮದ ಭೂಕಂದಾಯದ ಶೇ.೩೦ ಭಾಗ ಅನುದಾನ ದೊರೆಯುತ್ತಿದ್ದು, ವಿವಿಧ ಉದ್ದೇಶಗಳಿಗಾಗಿ ಶೇ೧೦ ವಿವೇಚನಾಧೀನ ಅನುದಾನ ಸರ್ಕಾರದಿಂದ ಬರುತ್ತಿತ್ತು. ಅಲ್ಲದೆ ಪಂಚಾಯ್ತಿಯು ನಿವೇಶನ, ಕಟ್ಟಡ, ವ್ಯಾಪಾರ, ಉದ್ಯೋಗ, ಹಬ್ಬ, ಜಾತ್ರೆ, ಮನರಂಜನೆ ಹಾಗೂ ವಾಹನ ತೆರಿಗೆ ವಿಧಿಸುವ ಹಾಗೂ ಬಸ್‌ನಿಲ್ದಾಣ, ಮಾರುಕಟ್ಟೆ, ಗಾಡಿ ನಿಲ್ದಾಣಗಳಿಂದ ಸುಂಕ ಸಂಗ್ರಹಿಸುವ ಅಧಿಕಾರವನ್ನು ಹೊಂದಿತ್ತು. ಗ್ರಾಮಪಂಚಾಯ್ತಿಯ ಕಾರ್ಯದರ್ಶಿಯು ಗ್ರಾಮಲೆಕ್ಕಿಗನಿದ್ದು, ರೂ. ೧೨,೦೦೦ ಕ್ಕಿಂತ ಹೆಚ್ಚು ವಾರ್ಷಿಕ ಆದಾಯವಿರುವ ಗ್ರಾಮಪಂಚಾಯ್ತಿಗಳಿಗೆ ಪ್ರತ್ಯೇಕವಾಗಿ ಪಂಚಾಯ್ತಿ ಕಾರ್ಯದರ್ಶಿಯನ್ನು ನೇಮಿಸಬಹುದಾಗಿತ್ತು. ಗ್ರಾಮಪಂಚಾಯ್ತಿ ಮಟ್ಟದಲ್ಲಿ ಚುನಾವಣೆ ಮೂಲಕ ೧. ಕೃಷಿ ೨. ಆರೋಗ್ಯ, ೩. ಗ್ರಾಮಕೈಗಾರಿಕೆ, ೪. ಸಾಮಾಜಿಕ ನ್ಯಾಯ ಸಮಿತಿಯನ್ನು ರಚಿಸಿ ಕಾರ್ಯ ನಿರ್ವಹಿಸಬೇಕಾಗಿದ್ದು, ಕನಿಷ್ಟ ತಿಂಗಳಿಗೊಮ್ಮೆಯಾದರೂ ಗ್ರಾಮಪಂಚಾಯ್ತಿಯ ಸಭೆಯನ್ನು ಸೇರಿಸಬೇಕಾಗಿತ್ತು. ೧೯೯೩ರ ಪಂಚಾಯತ್ ರಾಜ್ ಕಾಯ್ದೆಯ ನಂತರವೂ ಗ್ರಾಮಪಂಚಾಯ್ತಿ ವ್ಯವಸ್ಥೆ ಮುಂದುವರಿದಿದೆ.

**ಕರ್ನಾಟಕ ಜಿಲ್ಲಾ ಪರಿಷತ್ ಕಾಯ್ದೆ ೧೯೮೩ :** ಆಡಳಿತ ವಿಕೇಂದ್ರೀಕರಣದ ಮೂಲಕ ಗ್ರಾಮಸ್ವರಾಜ್ ಸ್ಥಾಪಿಸುವ ಉದ್ದೇಶದಿಂದ ಸರ್ಕಾರವು ೧೯೮೩ರಲ್ಲಿ ಸ್ವೀಕರಿಸಿದ ಈ ಕಾಯ್ದೆಯನ್ವಯ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪರಿಷತ್, ಗ್ರಾಮಮಟ್ಟದಲ್ಲಿ ಮಂಡಲ ಪಂಚಾಯ್ತಿ ತಾಲೂಕು ಮಟ್ಟದಲ್ಲಿ ತಾಲೂಕು ಪಂಚಾಯಿತಿ ಸಮಿತಿಯು ೧೯೮೭ರಲ್ಲಿ ನರಸೀಪುರ ತಾಲೂಕಿನಲ್ಲಿ ಅಸ್ತಿತ್ವಕ್ಕೆ ಬಂದವು.

**ಮಂಡಲ ಪಂಚಾಯಿತಿಗಳು :** ಸರ್ಕಾರದ ವಿವಿಧ ಯೋಜನೆಗಳನ್ನು ಜಾರಿಗೊಳಿಸಲು ಹಾಗೂ ವಯಸ್ಕರ ಶಿಕ್ಷಣ, ಗೃಹ ನಿರ್ಮಾಣ, ಗ್ರಾಮೀಣ ನೀರು ಸರಬರಾಜು, ಹಿಂದುಳಿದ ವರ್ಗದವರ ಕಲ್ಯಾಣ, ಗ್ರಾಮೀಣ ರಸ್ತೆ–ಸೇತುವೆಗಳ ಅಭಿವೃದ್ಧಿ ಮುಂತಾದ ಕಲ್ಯಾಣ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಮಂಡಲ ಪಂಚಾಯ್ತಿಗಳ ಪಾತ್ರ ಹಿರಿದಾಗಿದ್ದು, ಎಂಟರಿಂದ ೧೨,೦೦೦ ಜನಸಂಖ್ಯೆ ಇರುವ ಹಳ್ಳಿ ಅಥವಾ ಹಳ್ಳಿಗಳ ಗುಂಪಿಗೊಂದು ಮಂಡಲ ಪಂಚಾಯ್ತಿಯನ್ನು ರಚಿಸಲಾಗಿದ್ದು, ಪ್ರತಿ ೪೦೦ ಜನರಿಗೆ ಒಬ್ಬ ಪ್ರತಿನಿಧಿಯನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಗುತ್ತದೆ. ಪ್ರತಿ ಮಂಡಲದಲ್ಲೂ ೨೦ ರಿಂದ ೩೦ ಸದಸ್ಯರಿದ್ದು, ಉಪಸಮಿತಿಗಳನ್ನು ರಚಿಸುವ ಮೂಲಕ ಮಂಡಲ ಪಂಚಾಯ್ತಿಯು ಅಭಿವೃದ್ಧಿ ಕಾರ್ಯದಲ್ಲಿ ತೊಡಗುತ್ತಿದ್ದು, ಅದಕ್ಕೆ ಪ್ರಧಾನ ಹಾಗೂ ಉಪಪ್ರಧಾನರಿರುತ್ತಾರೆ. ಇದರಂತೆ ೧೯೮೭–೯೩ರ ಅವಧಿಯಲ್ಲಿ ತಾಲೂಕಿನ ೧.ಕೊಡಗಹಳ್ಳಿ, ೨. ತುರುಗನೂರು, ೩. ಅಂಕನಹಳ್ಳಿ, ೪. ಅತ್ತಹಳ್ಳಿ, ೫. ಸೋಮನಾಥಪುರ, ೬. ಚಿದರಳ್ಳಿ, ೭. ದೊಡ್ಡಬಾಗಿಲು, ೮. ಸೋಸಲೆ,

